Achcut area Coming under Malaprabha Irrigation Scheme

525. SRI G. K. TAKKED (Parasgod).—Will the Minister of State for Major and Medium Irrigation be pleased to state :—

(a) the extent of saline and alkaline land which comes under achcut area of Malaprapha Irrigation Scheme ;

(b) the extent of land which has become saline and alkaline in defferent villages ;

(c) the measures taken by the Government to eradicate alkalinity and salinity ;

(d) whether Government would issue instructions to the farmers to grow paddy in saline land ?

SRI B. B. CHIMMANAKATTI (Minister of State for Major and Medium Irrigation).—

(a) Extent of saline and alkaline lands which comes under the achcut area of Malaprabha Irrigation Scheme is as f llows :—

Alkaline land : 344 acres 22 guntas

Saline land : 2440 acres 36 guntas

* (b) Details are laid on the Table of the House.

(c) Agricultural Experts advice has been sought for, to identify the saline and alkaline lands and some blocks have been selected tentatively for its eradication.

(d) Suitable action would be taken after got examined this matter by the Agricultural Experts.

ಶ್ರೀ ಜಿ.ಕೆ. ತಕ್ಕೇಡ್.—ಮಾನ್ಯ ಅಧ್ಯಕ್ಷರೆ, ಮಲಪ್ರಭಾ ನೀರಾವರಿ ಯೋಜನೆಯಲ್ಲಿ ಈಗಾಗಲೇ ಎಷ್ಟು ಎಕರೆಗೆ ನೀರನ್ನು ಕೊಡುತ್ತಿದ್ದೀರಿ ಅದರಲ್ಲಿ ಎಳಿಳಿಂ ಎಕರೆ ಭೂಮಿ ಜೌಳು ಆಗಿದೆ, ಎಷ್ಟು ಷಿಷಿಳ ಎಕರೆ ಸೌಳು ಆಗಿದೆ. ಪ್ರಾರಂಭದಲ್ಲೇ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಚೌಳು, ಸೌಳು ಆಗಿರುವುದನ್ನು ಸರ್ಕಾರದವರು ಕೂಡಲೇ ಒಕ್ಕಲುತನದ ಖಾತೆಯ ಮುಖಾಂತರ ಸರ್ವೆ ಮಾಡಿಸಿ ಅಲ್ಲಿ ಬತ್ತ ಮತ್ತು ಕಬ್ಬನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮಲಪ್ರಭಾ ಯೋಜನೆಗೆ ಸುಮಾರು ೫ ೨೬ ಲಕ್ಷ ಎಕರೆ ಪ್ರದೇಶ ನೀರಾವರಿಗೆ ಒಳಪಡಬೇಕಾಗಿತ್ತು. ಈಗಾಗಲೆ ಆದರಲ್ಲಿ ಸುಮಾರು ೨.೮೬ ಲಕ್ಷ ಎಕರೆ ಪ್ರದೇಶ ನೀರಾವರಿಯಾಗಿದೆ. ಈ ಪ್ರದೇಶದಲ್ಲಿ ಎಷ್ಟು ಎಕರೆ ಚೌಳು ಮತ್ತು ಸೌಳು ಇದೆ ಎಂಬ ಬಗ್ಗೆ ಈಗಾಗಲೇ ನಾನು ಒಂದು ಪಟ್ಟಿಯನ್ನೆ ತಮಗೆ ಒದಗಿಸಿದ್ದೇನೆ ಈ ಬಗ್ಗೆ ಕನ್ಸಲ್ಟೆಟಿವ್ ಕಮಿಟಿಯಲ್ಲಿ ಡಿಸ್ಕಸ್ ಮಾಡಿದ್ದೇವೆ. ಅವರು ಒಂದು ಉಪ ಸಮಿತಿಯನ್ನು ಮಾಡಿದ್ದಾರೆ, ಆದರಲ್ಲಿ ಮಾನ್ಯ ಸದಸ್ಯರಾದ ತಕ್ಕೇಡರವರೂ, ಆರ್. ಎಸ್. ಪಾಟೀಲರವರೂ, ನಮ್ಮ ಇಂ ನಿಯರ್‌ಗಳೂ ಮತ್ತು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರೂ ಇದ್ದಾರೆ. ಅವರು ಯಾವ ರೀತಿ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ವರದಿಯಲ್ಲಿ ತಿಳಿಸುತ್ತಾರೋ ಆದರ ಪ್ರಕಾರ ಕ್ರಮ ಕೈಗೊಳ್ಳುತ್ತೇವೆ.

---

* Lib No. 16 dated 14th July 1982

ಶ್ರೀ ಜಿ.ಕೆ ತಕ್ಕೀಡ್.—ಸೌಳು ಪ್ರದೇಶದಲ್ಲಿ ಬತ್ತ ಮತ್ತು ಕಬ್ಬು ಹಾಕುವುದಕ್ಕೆ ಸರ್ಕಾರದವರು ಒಪ್ಪಿಗೆ ಕೊಡಬೇಕೆಂದು ಉಪ ಸಮಿತಿಯವರು ಕೇಳಿದ್ದಾರೆ. ನೀವು ಆ ಭೂಮಿಯನ್ನು ಕೊಡದಿದ್ದರೆ ಈ ಚೌಳು ದಿನೇ ದಿನೇ ಹೆಚ್ಚಾಗುತ್ತದೆ. ಆದ್ದರಿಂದ ಅಲ್ಲಿ ಕಬ್ಬು ಮತ್ತು ಬತ್ತವನ್ನು ಬೆಳೆಯುವುದಕ್ಕೆ ಒಪ್ಪಿಗೆ ಕೊಡುತ್ತೀರಾ ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಇಲ್ಲಿ ಕ್ರಾಪಿಂಗ್ ಪ್ಯಾಟ್ರನ್ ಮಾಡಿದ್ದಾರೆ. ಆದರೆ ಚೌಳು ಭೂಮಿಯಲ್ಲಿ ಪ್ರತ್ಯೇಕವಾಗಿ ಬತ್ತ ಮತ್ತು ಕಬ್ಬನ್ನು ಬೆಳೆಯಲು ತಾವು ಅನುಮತಿ ಕೇಳುತ್ತಿದ್ದೀರಿ. ಆದ್ದರಿಂದ ಇದನ್ನು ನಾನು ಪರಿಶೀಲಿಸಬೇಕಾಗುತ್ತದೆ. ಏಕೆಂದರೆ, ಬತ್ತ ಬೆಳೆಯುವುದಕ್ಕೆ ನಾವು ಅವರಿಗೆ ಅನುಮತಿ ಕೊಟ್ಟರೆ ಉಳಿದ ಪ್ರದೇಶಕ್ಕೂ ತೊಂದರೆಯಾಗುತ್ತದೆ. ಅಲ್ಲದೆ ನೀರು ಕೊಡುವುದಕ್ಕೂ ಕೂಡ ನಮಗೆ ತೊಂದರೆಯಾಗುತ್ತದೆ. ಇದರ ಬಗ್ಗೆ ಅಡ್ಮಿನಿಸ್ಟ್ರೇಟರ್ ಕೂಡ ಡಿಸ್ಕಸ್ ಮಾಡುವವರಿದ್ದಾರೆ ಅದನ್ನು ಚರ್ಚೆಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ನಾವು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಲಪ್ರಭಾ ಯೋಜನೆಯಲ್ಲಿ ಚೌಳು ಪ್ರದೇಶದ ಬಗ್ಗೆ ನರಗುಂದ, ನವಲಗುಂದ ರೈತರ ಬಂಡಾಯ ಆದಮೇಲೆ ನಮ್ಮ ಕಮಿಟಿಯನ್ನು ನೇಮಕ ಮಾಡಲಾಯಿತು. ನಾವು ವರದಿಯನ್ನು ಕೊಟ್ಟಿದ್ದೇವೆ. ಸವದತ್ತಿ ಹತ್ತಿರ ಸುಮಾರು ೧ ಸಾವಿರ ಎಕರೆ ಚೌಳು ಇದ್ದುದ್ದು ಇವತ್ತು ಸುಮಾರು ೨೦ ಸಾವಿರ ಎಕರೆವರೆಗೆ ಆಗಿದೆ. ಇದಕ್ಕೆ ಕಾರಣ ನೀರು ಬಿಡತಕ್ಕ ಕಾಲುವೆ ಸರಿಯಾಗಿಲ್ಲ. ಬಸಿನೀರು ಹೋಗುವುದಕ್ಕೆ ವ್ಯವಸ್ಥೆ ಇಲ್ಲ. ಕಪ್ಪು ಭೂಮಿ ಆದರೆ ನೀರು ನಿಲ್ಲುತ್ತದೆ. ಲೆವೆಲಿಂಗ್ ಆಫ್ ದಿ ಲ್ಯಾಂಡ್ ಆಗಿಲ್ಲ. ನೀರನ್ನು ತೆಗೆದುಕೊಂಡು ಹೋಗುವಾಗ ಕೆಲವು ಹಳ್ಳಿಗಳಲ್ಲಿ ೨೪ ಗಂಟೆ ಕಾಲವೂ ನೀರು ಹರಿಯುತ್ತಿರುತ್ತದೆ. ಅಲ್ಲಿಗೆ ನಮ್ಮ ಕಮಿಟಿಯವರೂ, ಸರ್ಕಾರದ ಅಧಿಕಾರಿಗಳೂ ಹೋಗಿ ನೋಡಿಕೊಂಡು ಬಂದಿದ್ದೇವೆ. ಇದರ ಬಗ್ಗೆ ರೆಕಾರ್ಡ್ಸ್ ಹಾಗೂ ನಿರ್ಣಯ ಕೂಡ ಆಗಿದ್ದು ಅದು ನಿಮ್ಮ ಕಡೆ ಇದೆ. ನಾವು ವರದಿಯನ್ನು ಕೊಟ್ಟು ಸುಮಾರು ಒಂದೂವರೆ ವರ್ಷವಾಗಿದೆ. ಇದರ ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಸದಸ್ಯರು ಕೊಟ್ಟಿರತಕ್ಕ ವರದಿ ನನ್ನ ಅವಗಾಹನೆಗೆ ಬಂದಿಲ್ಲ. ಆ ವರದಿಯನ್ನು ತರಿಸಿನೋಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತಿಳಿಸುತ್ತೇನೆ. ಮುಖ್ಯವಾಗಿ ಅದು ನೀರಾವರಿ ಪ್ರದೇಶವಾಗಿರುವುದರಿಂದ ಅದು ಚೌಳು ಮತ್ತು ಸೌಳು ಭೂಮಿ ಆಗಿದೆಯೆಂದು ಹೇಳುತ್ತಿದ್ದೀರಿ. ಬಹುಶ ಹೆಚ್ಚಿಗೆ ನೀರನ್ನು ಉಪಯೋಗಿಸುತ್ತಿರುವುದರಿಂದ ಅಥವಾ ಬೇರೆ ಕಾರಣದಿಂದ ಅದು ಚೌಳು ಮತ್ತು ಸೌಳು ಪ್ರದೇಶವಾಗಿರಬಹುದು. ಇದು ಸುಮಾರು ೨೦ ಸಾವಿರ ಎಕರೆಯಷ್ಟಿದೆಯೆಂದು ಹೇಳುತ್ತಿದ್ದೀರಿ. ಆದರೆ ನಮ್ಮ ಅಂದಾಜು ಪ್ರಕಾರ ಸುಮಾರು ೩ ಸಾವಿರ ಎಕರೆ ಇರಬಹುದು. ತಾವು ಹೇಳಿದಂತೆ ಪ್ರತಿವರ್ಷ ಇದು ಜಾಸ್ತಿಯಾಗುವುದರಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ, ಇದಕ್ಕಾಗಿ ನೇಮಕವಾಗಿರುವ ಉಪ ಸಮಿತಿಯವರು ಏನು ಸೂಚನೆ ಕೊಡುತ್ತಾರೆ ಅದರ ಪ್ರಕಾರ ಕ್ರಮ ಕೈಗೊಳ್ಳುತ್ತೇವೆ. ಇದನ್ನೂ ಕೂಡ ಕಾಡಾದವರೇ ಇಂಪ್ಲಿಮೆಂಟ್ ಮಾಡಬೇಕಾಗಿದೆ. ಒಂದುವೇಳೆ ನಮ್ಮಿಂದ ಇದನ್ನು ಮಾಡುವುದಕ್ಕೆ ಸಾಧ್ಯವಾಗದಿದ್ದರೆ ಕಾಡಾದವರಿಗೆ ಹೇಳಿ ಮಾಡಿಸಿ ಕೊಡುತ್ತೇವೆ.

೧೦-೩೦ ಎ.ಎಂ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ರಿಪೋರ್ಟನ್ನೇ ನೋಡಿಲ್ಲವೆಂದರೆ ಬಹಳ ಆಶ್ಚರ್ಯವಾಗುತ್ತದೆ. ಸರ್ಕಾರ ಈ ಸದನದಲ್ಲಿ ಆಶ್ವಾಸನೆಗಳನ್ನು ಕೊಟ್ಟಿದೆ. ರಿಪೋರ್ಟ್ ಬಂದಮೇಲೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ.

ಅಧ್ಯಕ್ಷರು.—ರಿಪೋರ್ಟನ್ನು ನೋಡದೆಯೇ ನೋಡಿದ್ದೇನೆಂದು ಹೇಳಿದ್ದರೆ ಸಂತೋಷಪಡುತ್ತಿದ್ದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅಂದರೆ ನಾವು ಸರ್ಕಾರ ಯಾವ ಕೆಲಸ ಮಾಡುತ್ತಿದೆ ಎನ್ನುವ ಬಗ್ಗೆ ಹೇಳುತ್ತಿದ್ದೇವೆ. ಮೊನ್ನೆ ನಡೆದ ಕಮಿಟಿಯಲ್ಲಿ ರಿಪೋರ್ಟನ್ನು ಮಂಡಿಸಿದ್ದಾರೆ. ರಿಪೋರ್ಟನ್ನು ಮಂಡಿಸುವಾಗ ಎಲ್ಲ ಆಫೀಸರ್‌ಗಳೂ ಇದ್ದರು ಎಂದಮೇಲೆ ರಿಪೋರ್ಟ್‌ನ್ನು ಮಾನ್ಯ ಸಚಿವರು ನೋಡಿಲ್ಲವೆಂದರೆ ಬಹಳ ಆಶ್ಚರ್ಯವಾಗುತ್ತದೆ. ಇಷ್ಟರೊಳಗೆ ರಿಪೋರ್ಟನ್ನು ತರಿಸಿಕೊಂಡು ನೋಡ

ಬೇಕಾಗಿತ್ತು. ಕಾಡದವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅದು ನಿಮಗೂ ಗೊತ್ತಿರುತ್ತದೆ. ನಿಮ್ಮ ಆಫೀಸರ್‌ನ್ನು ಕರೆಸಿ ನೋಡಿ ಬಂದು ಅದನ್ನು ತಿಳಿದುಕೊಂಡು ಈಗಲಾದರೂ ಸೂಕ್ತ ಕ್ರಮ ಕೈಗೊಳ್ಳುತ್ತೀರಾ ಸ್ವಾಮಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ವರದಿಯನ್ನು ತರಿಸಿಕೊಂಡು ಪರಿಶೀಲನೆ ಮಾಡುತ್ತೇನೆ.

ಶ್ರೀ ಜಿ. ಕೆ. ತಕ್ಕೇಡ್.—ಮಾನ್ಯ ಅಧ್ಯಕ್ಷರೇ, ಸವದತ್ತಿ ಉಗರಗೋಳ, ಮನಿಕಟ್ಟಿ, ಮತ್ತು ಮನವಳ್ಳಿ. ಈ ಊರುಗಳಲ್ಲಿ ಸಾವಿರಾರು ಮನೆಗಳು ಚೌಳಿನಿಂದ ತೇವವಾಗಿ ಬೀಳಲಿಕ್ಕೆ ಹತ್ತಿದೆ. ೧೪ ಮನೆಗಳು ಸವದತ್ತಿಯಲ್ಲಿ, ೭೦ ಮನೆಗಳು ಉಗುರ ಗೋಳದಲ್ಲಿ, ಮನವಳ್ಳಿಯಲ್ಲಿ ಸುಮಾರು ೧೩೫ ಮನೆಗಳು ಬಿದ್ದು ಹೋಗಿದೆ. ಮತ್ತು ಅಡಿಷನಲ್ ಸೆಕ್ರೆಟರಿಯವರಾದ ವೆಂಕಟೇಶನ್ ಅವರು ಕೂಡ ಬಂದು ನೋಡಿದ್ದಾರೆ. ಈ ಬಗ್ಗೆ ಎರಡು ವರ್ಷಗಳಾದರೂ ಕೂಡ ಏನೂ ಕಾರ್ಯಕ್ರಮ ತೆಗೆದು ಕೊಂಡಿಲ್ಲ.

ಅಧ್ಯಕ್ಷರು.—ಪ್ರಶ್ನೆ ಏನು ಇದೆ, ನೀವು ಯಾವಾಗಲೂ ಮನವಳ್ಳಿಯದೇ ಹೇಳುತ್ತಿರಲ್ಲ.

ಶ್ರೀ ಜಿ. ಕೆ. ತಕ್ಕೇಡ್.—ಅದರೊಳಗೆ ಮನವಳ್ಳಿದ್ದೂ ಕೊಟ್ಟಿದ್ದಾರೆ. ಮನವಳ್ಳಿ ಸವದತ್ತಿ ತಾಲ್ಲೂಕಿನಲ್ಲಿ ಬರುತ್ತದೆ.

ಶ್ರೀ ಆರ್. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಲಪ್ರಭಾ ಯೋಜನೆಯಲ್ಲಿ ಅದರಲ್ಲೂ ಸವಳುಭೂಮಿ ವಿಶೇಷವಾಗಿ ಬಲದಂಡೆ ಪಕ್ಕದಲ್ಲಿ ಬರುತ್ತದೆ. ಆಲ್ಲಿ ಕಪ್ಪು ಭೂಮಿ ಇರುವುದರಿಂದ ಸವಳುಭೂಮಿ ಕಂಡುಬರುತ್ತದೆ. ಪಡನಾಲೆ ರಾಮದುರ್ಗ, ಸವದತ್ತಿಯ ಕೆಲವು ಭಾಗ ಬಾದಾಮಿಗೆ ಹೋಗುತ್ತಾ ಇನ್ನೂ ಸುಮಾರು ಭೂಮಿ ಡೆವಲಪ್‌ಮೆಂಟ್ ಆಗಿಲ್ಲ. ರಾಮದುರ್ಗ ಪೂರ್ತಿ ೨,೪೪೪ ಎಕರೆ ಭೂಮಿ ಚೌಳಾಗಿದೆ. ಇದನ್ನು ಪೂರ್ತಿಯಾಗಿ ಯೋಗ್ಯ ಭೂಮಿಯನ್ನಾಗಿ ಮಾಡಲು ಸಾಧ್ಯವಾಗಲಿಲ್ಲ. ತಾವೂ ಕೂಡ ಕಾಡಿಗೆ ಸಂಬಂಧಪಟ್ಟ ಪ್ರಶ್ನೆ ಎಂದು ಹೇಳಿದ್ದೀರಿ. ಕಾಡ ಅಡ್ಮಿನಿಸ್ಟ್ರೇಷನ್ ಏನು ಇದೆ ಅದನ್ನು ನೋಡಿಕೊಳ್ಳಲು ರಿಟೈರ್ ಆಗಿರತಕ್ಕಂಥವರನ್ನು ಹಾಕಿರುವುದರಿಂದ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಹನುಮಸಾಗರದಲ್ಲಿ ಒಂದೇ ಹಳ್ಳಿಯಲ್ಲಿ ಸುಮಾರು ಎರಡುನೂರು ಎಕರೆಗಳಿಗಿಂತ ಜಾಸ್ತಿ ಭೂಮಿ ಜಾಳಾಗುತ್ತಿದೆ. ತಾವು ಪ್ರತಿವರ್ಷ ಹೀಗೆಯೇ ಬಿಡುತ್ತಾ ಹೋದರೆ ಜಮೀನೆಲ್ಲ ಜವಳಾಗುವ ಸಂಭವವಿದೆ. ಆದುದರಿಂದ ತಾವು ಇಂಜಿನಿಯರ್‌ರವರಿಗೆ ಹಣಕಾಸನ್ನು ಒದಗಿಸಿ ಕೊಡಲು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರೆಂದು ಕೇಳುತ್ತಿದ್ದೇನೆ. ಇದರ ಬಗ್ಗೆ ಎಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೀರೋ ಆಷ್ಟು ಭೂಮಿ ಉಳಿಯಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಎಲ್ಲಾ ಭೂಮಿ ಜವಳಾಗುತ್ತಾ ಹೋಗುತ್ತದೆಂದು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ತಾವು ಏನೇನಂ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ಎಂಬುದರ ಬಗ್ಗೆ ದಯವಿಟ್ಟು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರೂ ಕೂಡ ಸಮಿತಿಯ ಸದಸ್ಯರಿದ್ದಾರೆ. ಅವರು ಸರ್ಕಾರಕ್ಕೆ ಎಷ್ಟು ಬೇಗ ರಿಪೋರ್ಟ್ ಕೊಡುತ್ತಾರೋ ಆಷ್ಟೇ ಶೀಘ್ರಗತಿಯಿಂದ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಜಿ. ಕೆ. ತಕ್ಕೇಡ್.—ಸಮಿತಿಯವರು ಈಗಾಗಲೇ ವರದಿಯನ್ನು ಕೊಟ್ಟಿದ್ದಾರೆ. ಅದು ಸರ್ಕಾರದ ಮುಂದೆ ಇದೆ. ಜವಳು ಭೂಮಿ ಪ್ರದೇಶಗಳಲ್ಲಿ ಇವತ್ತು ಬತ್ತ ಮತ್ತು ಕಬ್ಬು ಹಾಕಿ ತಾತ್ಪೂರ್ತಿಕ ಪರಿಹಾರ ಸಿಕ್ಕುತ್ತದೆಂದು ಆ ಭಾಗದ ಜನರು ಸರ್ಕಾರಕ್ಕೆ ಅನೇಕಸಲ ಕಾಡಾ ಮುಖಾಂತರ ಕೇಳಿಕೊಂಡಿದ್ದಾರೆ. ಒಂದೊಂದು ಹಳ್ಳಿಯಲ್ಲಿಯೂ ಸುಮಾರು ಏಳುನೂರು ಎಕರೆಯಿಂದ ಒಂದು ಸಾವಿರ ಎಕರೆಯವರೆವಿಗೂ ಪೂರ್ಣವಾಗಿ ನಾಶವಾಗಿ ಹೋಗಿರುತ್ತದೆ. ಆದ್ದರಿಂದ ಈ ಪ್ರದೇಶದಲ್ಲಿ ತೊಂದರೆಗೆ ಈಡಾಗಿರತಕ್ಕಂಥ ಜನರಿಗೆ ಪರಿಹಾರ ಕೊಟ್ಟು ಸರಿಪಡಿಸಲಿಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೇ ಎಂದು ಕೇಳುತ್ತೇನೆ ?.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮಾನ್ಯ ಸದಸ್ಯರು ಹೇಳಿದಹಾಗೆ, ಸಮಿತಿಯವರು ಇನ್ನೂ ಪೂರ್ತಿಯಾಗಿ ವರದಿಯನ್ನು ಕೊಟ್ಟಿಲ್ಲ. ಅವರು ಕೊಟ್ಟಿರತಕ್ಕ ರಿಪೋರ್ಟ್ ಪ್ರಿಲಿಮಿನರಿ ರಿಪೋರ್ಟ್‌ನಂತೆ ಕೊಟ್ಟಿದ್ದಾರೆ. ನಾವು ಸಮಗ್ರವಾಗಿ ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ

ಒಂದು ವರದಿಯನ್ನು ಸರ್ಕಾರಕ್ಕೆ ಕಳುಹಿಸಿ ನಾವು ಕೂಡ ಇದನ್ನು ಸರಿಪಡಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ಜಿ.ಕೆ. ತಕ್ಕೇಡ್.—ಸರ್ಕಾರದವರು ತಮ್ಮ ಹೊಣೆಯನ್ನು ಅರಿತುಕೊಳ್ಳಬೇಕು. ಮಾನ್ಯ ಅನುಗೋಳ ಅವರನ್ನೂ ಕೂಡ ಭೇಟಿಯಾಗಿದ್ದೆ. ವರದಿ ಬಂದಿದೆ ಎಂದು ಹೇಳಿರುತ್ತಾರೆ. ಈಗ ತಾತ್ಪೂರ್ತಿಕವಾಗಿ ಸ್ವಲ್ಪ ಮಳೆಯೂ ಕೂಡ ಆಗಿದೆ. ಬೌಳು ಭೂಮಿಯಲ್ಲಿ ಈಗ ಏನು ಹಾಕಬೇಕೆಂಬುದನ್ನು ತೋರಿಸಿಕೊಡಬೇಕು. ಇಲ್ಲದಿದ್ದರೆ ರೈತರು ಅನೇಕ ವಿಧವಾದ ನಷ್ಟಕ್ಕೆ ಒಳಗಾಗಬೇಕಾಗುತ್ತದೆ. ಆದ್ದರಿಂದ ಸಂಪೂರ್ಣವಾಗಿ ಜವಳಾಗಿರುವ ಭೂಮಿಯನ್ನು ನೋಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

(ಉತ್ತರ ಇಲ್ಲ)

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

QUESTIONS FOR ANSWERS ON THE DAY

(but not taken up)

Increase of beds in the General Hospital, in Tiptur taluk

857 SRI V. L. SHIVAPPA (Tiptur).—Will the Minister for Health and Family Welfare be pleased to state.

(a) the Period when the General Hospital in Tiptur Taluk Tumkur district, was opened ;

(b) whether there is any proposal to upgrade the said Hospital ;

(c) whether the Government have Proposed to increase the beds to 100 beds in the said Hospital

(d) whether any developmental Scheme has been prepared to the said Hospital ?

SRI A. K. ABDUL SAMAD (Minister for Health and Family Welfare)

(a) About 18 years ago.

(b) Yes.

(c) No.

(d) No.

Bhovi Families of Bande Narayanapura of Bangalore South

1132 SRI G. BASAVANAPPA (Holehonnur).—Will the Minister for Forest, Mines and Geology be pleased to state.—

(a) whether it is a fact that the Bhovi families of Bande Narayanapura of Bangalore South Taluk submitted a memorandum to the Government regarding the injustice done to them by depriving them